(FLOOD HAVOCS IN THE STATE)

ಶ್ರೀ ಹೆಚ್.ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ, ಇಂದು ಸಭೆಯಲ್ಲಿ ಸಚ್ಚಿ ಮೆಂಟರಿ ಎಸ್ಟಿಮೇಟ್ಸುಗಳನ್ನು ಸರಕಾರದವರು ಮಂಡಿಸಿದ್ದಾರೆ. ಇದರಲ್ಲಿ ಒಂದು ಪ್ರಶ್ನೆ ಬರುತ್ತದೆ. ನಾವು ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆರೆಯಹಾವಳಿಯನ್ನು ನೋಡಿಕೊಂಡುಬಂದು ತಮಗೆ ಒಂದು ಮೋಷನ್ ಕೂಡ ಕಳುಹಿಸಿದ್ದೇನೆ ಮಂತ್ರಿ ಇದಕ್ಕೆ ಇಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದೂ ಕೇಳಿದ್ದೇವೆ. ಈಗ ಇದರ ಜೊತೆಯಲ್ಲೇ ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆ? ಇಲ್ಲವೆ ಬೇರೆ ಕಾಲಾವಕಾಶ ತಾವು ಒದಗಿಸಿಕೊಡುತ್ತೀರೊ? ಇದರ ವಿವರಣ ನಮಗೆ ಬೇಕಾಗಿದೆ ಒಂದು ವೇಳೆ ನಾವು ಇಲ್ಲಿಚರ್ಚೆ ಮಾಡಿದರೆ ಮುಂದೆ ಅದು ಅಸಂಬದ್ಧ ಎಂದು ಹೇಳವಂತಾಗಬಾರದು ಇದಕ್ಕಾಗಿ ಸರಕಾರದ ವಿವರಣೆ ನಮಗೆ ಬೇಕು.

SRI S. M KRISHNA.—When the supplementary demands come up for discussion, the hon. Member can make use of that occasion to discuss about the havoc caused by floods.

Supply of Medicnies to Village Hospitals dispensaries in shimogaDistric

ಶ್ರೀ ಕಾಗೋಡು ತಿಮ್ಮಪ್ಪ(ಸಾಗರ).—ನಾನು ಕಳೆದ ಮೂರು ತಿಂಗಳ ಕೆಳಗೆ ಶಿವಮೊಗಾ ದಲ್ಲಿರುವ ಗ್ರಾಮಾಂತರ ಆಸ್ಪತ್ರೆಗಳಿಗೆ ಔಷಧಿಗಳನ್ನು ಕಳುಹಿಸಿಲ್ಲ ಎಂದು ಸರಕಾರದ ಗಮನ ಸೆಳೆದಿರುವ ಸೂಚನೆ ಕಳುಹಿಸಿದ್ದೆ ಮಾನ್ಯ ಆರೋಗ್ಯ ಮಂತ್ರಿಗಳು ಇದರ ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್. ಸಿದ್ಧವೀರಪ್ಪ —ನನಗೆ ತಮ್ಮ ಸೂಚನೆ ಬಂದಿದೆ. ನಾಳೆ ಇದರ ಬಗ್ಗೆ ವಿವರವಾಗಿ ಹೇಳಿಕೆ ಕೊಡುತ್ತೇನೆ. ಇದರಲ್ಲಿ ಒಂದೊಂದು ಜಿಲ್ಲೆಗೆ ಒಂದೊಂದು ಸಾರಿ ಆ ವರ್ಷಕ್ಕೆ ಪೂರ್ತಿ ಬೇಕಾಗುವ ಔಷಧಿಗಳನ್ನೂ ಒದಗಿಸುತ್ತಿದ್ದೇವೆ. ಇದರ ಎಲ್ಲಾ ವಿವರಗಳನ್ನೂ ನಾಳೆ ಸಬೆಯ ಮುಂದೆ ಇಡುತ್ತೇನೆ. ಇದರ ಬಗ್ಗೆ ಆಯಾ ಜಿಲ್ಲಾ ಹೆಲ್ತ್ ಆಫಿಕಾರಿಗಳಿಗೆ ಶೇಕಡಾ ಐವತ್ತರಷ್ಟು ಔಷಧಿಗಳನ್ನು ಸಾಲದೆಹೋದರೆ ಖರೀದಿ ಮಾಡಲು ಅವರಿಗೆ ಹಣ ಒದಗಿಸಿಕೊಡಲಾಗಿದೆ.

(60TH BIRTHDAY CELEBRATION OF THE CHIEF MINISTER)

ಶ್ರೀ ಕೆ. ಎಂ. ನಾಗಣ್ಣ (ಕೋಟೆ).—ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿ ನಮ್ಮ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಿರುವ ಶ್ರೀಮಾನ್ ಡಿ. ದೇವರಾಜ ಅರಸ್‌ರವರಿಗೆ ಅವರ ಅರವತ್ತನೆಯ ಹುಟ್ಟು ಹಬ್ಬದ ಶುಭಾಶಯವನ್ನು ಅವರಿಗೆ ಕೊಟ್ಟು ಮೊದಲು ಗೌರವಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ. ಅವರು ಇನ್ನೂ ಅರವತ್ತು ವರ್ಷಗಳ ಕಾಲ ಬದುಕಲಿ ಎಂದು ನಾವು ಹಾರೈಸುತ್ತೇವೆ. ನಮಗೆ ತಿಳಿದಿರುವಂತೆ ಅವರು ಬಡವರಿಗಾಗಿ ಹಾಗೂ ಹಿಂದುಳಿದಿರುವ ವರ್ಗದವರಿಗಾಗಿ ದುಡಿಯತಕ್ಕಂತಹ ಅವರ ಬಗ್ಗೆ ನಾವು ಕೆಲವು ಮಾತುಗಳನ್ನು ಹೇಳಬೇಕಾಗಿದೆ. ನಾನು ಅವರಿಗಿಂತ ಹಿರಿಯ ನಾಗಿರುವುದರಿಂದ ಅವರಿಗೆ ಒಂದು ಕಿವಿಮಾತನ್ನು ಇಲ್ಲಿ ಅವರಿಗೆ ಹೇಳಬಯಸುತ್ತೇನೆ. ಮತ್ತು ಅವರಲ್ಲಿ ನಾನು ಪಾರ್ಥನೆ ಮಾಡುವುದು ಇಂದು ಅವರಿಗೆ ಶುಭಾಶಯವನ್ನು ಕೋರಲು ಲಾಲ್‌ಬಾಗಿನಲ್ಲಿರುವ ಗ್ಲಾಸ ಹೌಸಿನಲ್ಲಿ ಒಂದ ಸಮಾರಂಭವನ್ನು ಕೂಡ ಏರ್ಪಾಡುಮಾಡಿದ್ದಾರೆ. ಯಾರು ಇದನ್ನು ಏರ್ಪಾಡುಮಾಡಿ ಇಂತಹ ಸಮಾರಂಭಗಳನ್ನು ಮಾಡುತ್ತಿದ್ದಾರೋ ಇವರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಹುಚ್ಚರಾಗಿರಬೇಕೆಂದು ಸಲಹೆ ಮಾಡುತ್ತೇನೆ. ಇವರ ಒಳ್ಳೆಯತನವನ್ನು ಇವರು ದುರುಪಯೋಗ ಮಾಡುತ್ತಾರೆ ಇದಕ್ಕಾಗಿ ನಾನು ಇಂತಹ ಸಮಾರಂಭಗಳಿಗೆ ಒಪ್ಪಿಗೆಕೊಡುವ ಮುನ್ನ ಸ್ವಲ್ಪ ಹುಷಾರಾಗಿರಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ.